## ಅನುವಾದಿತ ಕತೆ

ಅದಕ್ಕಾಗಿಯೇ ನಾನು ಅವನಲ್ಲಿ 'ಈಗ ಹೋಗುವುದು ಬೇಡ'ವೆಂದು ಮತ್ತೆ ಮತ್ತೆ ಹೇಳಿದ್ದೆ. ಅವನ ಕಾಲಿಗೂ ಬಿದ್ದಿದ್ದೇನೆ. ಅಪ್ಪ ಬದುಕಿರುವಷ್ಟು ಸಮಯ ಇಲ್ಲಿಯೇ ಇರುವಂತೆ ಬೇಡಿಕೊಂಡೆ. ಆಮೇಲೆ ಬೇಕಾದರೆ 'ಹೊಸ ಮನೆ ಕಟ್ಟಿಸು... ಫ್ಲ್ಯಾಟ್ ಖರೀದಿಸು... ಬಾಡಿಗೆ ಮನೆಯಲ್ಲಾದರೂ ಇರು... ನಿನಗೆ ಇಷ್ಟಬಂದ ಹಾಗೆ ಮಾಡು, ನಾನು ಅದಕ್ಕೆ ಅಡ್ಡಿಪಡಿಸುವುದೂ ಇಲ್ಲ. ನನ್ನ ಪಾಡು ನಾನು ನೋಡಿಕೊಳ್ಳುತ್ತೇನೆ. ಅವರು ಹೋದ ಬಳಿಕ ಯಾವುದಾದರೂ ವೃದ್ಧಾಶ್ರಮವನ್ನಾಗಲಿ ಅಥವಾ ಧರ್ಮಛತ್ರವನ್ನಾಗಲಿ ಹುಡುಕಿ ಅಲ್ಲಿರುತ್ತೇನೆ' ಎಂದು ಹೇಳಿದ್ದೆ.

ಆದರೆ, ಅವನು ನಿರ್ವಿಕಾರನಾಗಿ, ಮೌನವಾಗಿ ಇದ್ದುಬಿಟ್ಟ. ಹಾಂ ಎನ್ನಲಿಲ್ಲ ಹೂಂ ಎನ್ನಲಿಲ್ಲ. ನನ್ನ ಮಾತು ಕಿವಿಗೆ ಬೀಳದ ಹಾಗೆ ಹೊರಡುವ ಸಿದ್ಧತೆಯಲ್ಲಿ ಮಗ್ನನಾಗಿದ್ದ. ನಾಳೆ ಬೆಳಗ್ಗೆ ಅವನು ಹೆಂಡತಿ ಮಕ್ಕಳನ್ನು ಕರೆದುಕೊಂಡು ಹೋಗುತ್ತಾನೆ. ಕಳೆದ ನಾಲ್ಕು ದಿನಗಳಿಂದ ಹೆಂಡತಿಯ ಜೊತೆ ಸೇರಿ ರಾತ್ರಿ ಹಗಲೆನ್ನದೆ ಸಾಮಾನುಗಳನ್ನು ಆಯ್ದು ಕಟ್ಟಿಡಲಾಗಿದೆ. ನಾಳೆ ಅವುಗಳನ್ನು ಅವರು ತೆಗೆದುಕೊಂಡು ಹೋಗುವವರಿದ್ದಾರೆ. ಬೆಳಗ್ಗೆ ಬೆಳಕು ಹರಿಯುವಾಗ ಅವನು ಈ ಮನೆಗೆ ಬೆನ್ನು ತೋರಿಸಿ ಹೋಗಲಿದ್ದಾನೆ.

ನನ್ನ ವಿನಂತಿ, ನನ್ನ ದುಃಖ ಮತ್ತು ನಮ್ಮಿಬ್ಬರ ಪ್ರೀತಿ–ವಾತ್ಸಲ್ಯಗಳನ್ನು ಪರಿಗಣಿಸದೆ ಅವನು ಈ ಮನೆ ಬಿಟ್ಟು ಹೋಗಲಿದ್ದಾನೆ. ಅವನಿಗಾಗಿ ನಾವು ಪಟ್ಟ ಶ್ರಮ, ಕಷ್ಟ ಯಾವುದೂ ಅವನಿಗೆ ನೆನಪಿಲ್ಲ. ಏಕದಂ ಪರಕೀಯನ ಹಾಗೆ ಅಪರಿಚಿತನ ಹಾಗೆ ವರ್ತಿಸುತ್ತಿದ್ದಾನೆ. ನನ್ನ ಬದುಕಿನ ಒಂಬತ್ತು ತಿಂಗಳು ಅವನನ್ನು ಹೊಟ್ಟೆಯಲ್ಲಿಟ್ಟು ಸಂಭಾಳಿಸಿದೆ. ಎದೆಯ ಅಮೃತವನ್ನು ನೀಡಿ ಮಗುವಾಗಿದ್ದವನನ್ನು ದೊಡ್ಡವನಾಗಿ ಬೆಳೆಸಿದೆ. ನನ್ನ ಮಾತಿನಲ್ಲಿ ಅವನು ವಿಶ್ವಾಸ ಇಡಲಿಲ್ಲ. ನಾವು ಹಲವು ವರ್ಷಗಳನ್ನು ಜೊತೆಯಾಗಿಯೇ ಕಳೆದಿದ್ದರೂ, ಅವನು ಅವಳ ಮಾತನ್ನು ಮಾತ್ರ ಕಣ್ಣುಮುಚ್ಚಿ ಸತ್ಯವೆಂದು ನಂಬಿದ. ಅವನಿಗೆ ಉತ್ತಮ ಭವಿಷ್ಯ ಒದಗಿ ಬರಲಿ ಎಂದು ಮೂಳೆ ಸವೆಸಿದ ಅಪ್ಪನ ಮಾನಸಿಕ ಸ್ಥಿತಿಯನ್ನು ಅರಿಯದೆ ಅವನ ಮೇಲೆ ಸಲ್ಲದ ಆರೋಪವನ್ನು ಹೊರೆಸಿದ ಮತ್ತು ಅಪ್ಪನ ಆ ಕೃತ್ಯಕ್ಕೆ ಶಿಕ್ಷೆ ನೀಡುವ ರೀತಿಯಿಂದ ಅವನು ನಾಳೆ ಬೆಳಗ್ಗೆ ಹೆಂಡತಿ, ಮಕ್ಕಳನ್ನು ಕರೆದುಕೊಂಡು ಮನೆ ಬಿಟ್ಟು ಹೋಗುತ್ತಿದ್ದಾನೆ! ಮನುಷ್ಯನಿಗೆ ಶಿಕ್ಷಣವು ವಿವೇಕವನ್ನು ನೀಡುತ್ತದೆ ಎಂದು ಹೇಳುತ್ತಾರೆ. ಒಳ್ಳೆಯದು ಕೆಟ್ಟದ್ದರ ತಿಳಿವಳಿಕೆಯನ್ನು ನೀಡುತ್ತದೆ ಎನ್ನುತ್ತಾರೆ. ಆದರೆ, ಇವನು ಪಡೆದ ಶಿಕ್ಷಣ, ಬಿ.ಇ. ಪದವಿಯಿಂದ ಯಾವ ಪ್ರಯೋಜನವೂ ಆಗಲಿಲ್ಲವಲ್ಲ.

ಅಪ್ಪನ ಅನಾರೋಗ್ಯವನ್ನು ತಿಳಿದು, ಅವರಿಗೆ ಉತ್ತಮ ಚಿಕಿತ್ಸೆ ನೀಡುವ ಬದಲಾಗಿ ಅವರನ್ನು ಇಂತಹ ಸ್ಥಿತಿಯಲ್ಲಿ ಬಿಟ್ಟು ಕೈ ಜಾಡಿಸಿ ಆರಾಮವಾಗಿ ಹೋಗುತ್ತಿದ್ದಾನೆ. ನಾನು ಎಷ್ಟು ರೀತಿಯಲ್ಲಿ ಹೇಳಿದೆ, "ನೋಡು ಮಗನೇ, ಅವರಿಗೆ ಬುದ್ಧಿ ಭ್ರಮಣೆ ಆಗಿದೆ ಕಣಪ್ಪಾ. ಯಾವುದೋ ಮಾನಸಿಕ ರೋಗ ಕಾಡುತ್ತಿರುವುದರಿಂದ ಅವರು ಹಾಗೆ ವರ್ತಿಸಿದ್ದಾರೆ. ಅವರಿಗೆ ಸರಿ–ತಪ್ಪುಗಳ ಅರಿವಿಲ್ಲ."

ಆದರೆ, ಅವನು ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಬದಲಾಗಿ ನಾನು ಅವರ ಪಕ್ಷವಹಿಸಿದ ಕಾರಣಕ್ಕಾಗಿ ನನಗೇ ಏನೇನೋ ಮಾತುಗಳನ್ನು ಆಡಿದ. ಇವ ಹೀಗಾದರೆ ಇವನ ತಂಗಿ ಹಾಗೆ. ಅಪ್ಪ ಅವಳನ್ನು ಅಂಗೈಯಲ್ಲಿಟ್ಟು ಪೋಷಿಸಿದರು. ಅವಳ ಬೇಕು ಬೇಡಗಳನ್ನು ಪೂರೈಸುತ್ತಾ ಅವರಿಗೆ ಹಗಲು ರಾತ್ರಿಯ ಪರಿವೆಯೇ ಇರುತ್ತಿರಲಿಲ್ಲ. ಅವಳ ಸುಖೀ ಭವಿಷ್ಯಕ್ಕಾಗಿ ಅವಳಪ್ಪ ತನ್ನ ಇಡೀ ಬದುಕಿನ ಉಳಿತಾಯವನ್ನೆಲ್ಲಾ ಖರ್ಚು ಮಾಡಿದರು. ಅವಳು–ನನ್ನ ಮಗಳು ಗೌರಿ, ಅಣ್ಣ ಮತ್ತು ಅತ್ತಿಗೆ ಅಪ್ಪನ ಮೇಲೆ ಮಾಡಿದ ಆರೋಪವನ್ನು ಮೌನವಾಗಿ ಕೇಳಿಸಿಕೊಂಡು ಹೊರಟು ಹೋದಳು. ಈಗ ಅಪ್ಪನಿಗೆ ವಯಸ್ಸಾಗಿದೆ. ಇವತ್ತಲ್ಲ ನಾಳೆ ಅವರು ಕಣ್ಣುಮುಚ್ಚಲಿದ್ದಾರೆ. ಆಗ ತೌರುಮನೆಯ ಬಾಗಿಲು ತೆರೆದಿರಬೇಕಾದರೆ ಅಣ್ಣ ಅತ್ತಿಗೆಯೊಂದಿಗೆ ಸೌಹಾರ್ದದೊಂದಿಗೆ ಇರಬೇಕಾಗುತ್ತದೆ. ಈ ಧೂರ್ತ ವಿಚಾರದಿಂದ ಸತ್ಯವನ್ನು ಮರೆಮಾಚಿ ಆಕೆ ಮೌನವಾಗಿ ಉಳಿದಳು.